**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ,** ಕಾರಟಗಿ(ಸಂಚಾರಿ ಪೀಠ).

**ಸಿ. ಸಿ. ನಂ ಃ 3713/2021**

**ಪಿರ್ಯಾದುದಾರರು** ಃ ಶ್ರೀ. ಎನ್. ಶ್ರೀನಿವಾಸ
ತಂದೆ ಸೂರ್ಯನಾರಾಯಣ,
ವಯಾಃ 49 ವರ್ಷ, ಉಃ ಒಕ್ಕಲುತನ ಮತ್ತು ಮರ್ಲಾನಹಳ್ಳಿಯ ವೆಂಕಟಲಕ್ಷ್ಮಿ ಇಂಡಸ್ಟ್ರೀಸ್‌ನ ಪಾಲುದಾರ, ಸಾಃ ಮರ್ಲ್ಲಾನಹಳ್ಳಿ,
ತಾಃ ಕಾರಟಗಿ, ಜಿಃ ಕೊಪ್ಪಳ.

**ವಿರುದ್ಧ**

**ಆರೋಪಿ** ಃ ಶ್ರೀಮತಿ. ನಳಿನಿ ಗಂಡ ಗೋಪಾಲಕೃಷ್ಣ,
ವಯಾಃ 37 ವರ್ಷ, ಉಃ ಒಕ್ಕಲುತನ ಮತ್ತು ರಿಯಲ್ ಎಸ್ಟೇಟ್ ವ್ಯವಹಾರ, ಸಾಃ ಟೀಚರ್ಸ್ ಕಾಲೋನಿ, 14 ನೇ ವಾರ್ಡ್, ರಾಮನಗರ, ಕಾರಟಗಿ,
ತಾಃ ಕಾರಟಗಿ, ಜಿಃ ಕೊಪ್ಪಳ.

**ಆಪಾದನೆ**

ಆರೋಪಿಯಾದ ನೀನು ಮತ್ತು ಫಿರ್ಯಾದಿ ಪರಿಚಯವಿದ್ದು, ಸದರಿ ಪರಿಚಯ ಆಧಾರದ ಮೇರೆಗೆ ಆರೋಪಿಯಾದ ನೀನು ಫಿರ್ಯಾದಿಯಿಂದ ದಿಃ 12.01.2020 ರಂದು ರೂ.15,00,000/- ರೂಪಾಯಿಗಳು ಕುಟುಂಬದ ಅಗತ್ಯತೆಗಳಿಗಾಗಿ ಕೈ ಗಡ ಸಾಲವನ್ನು ಪಡೆದಿದ್ದು, ನಂತರ ಫಿರ್ಯಾದಿ ಸಾಲವನ್ನು ವಾಪಾಸ್ಸು ತೀರಿಸು ಅಂತಾ ಕೇಳಿದಾಗ ಆರೋಪಿಯಾದ ನೀನು ನಿನ್ನ ಐ.ಡಿ.ಬಿ.ಐ ಬ್ಯಾಂಕ ಕಾರಟಗಿ, ಶಾಖೆಗೆ ಸಂಬಂಧಪಟ್ಟ ಚೆಕ್ ಸಂ.002461, ದಿನಾಂಕಃ 19.02.2021 ಎಂದು ಮುಂಗಡ ದಿನಾಂಕ ನಮೂದಿಸಿ ಒಟ್ಟು ರೂ.15,00,000/- ರೂಪಾಯಿಗಳಿಗೆ ಇದನ್ನು ಫಿರ್ಯಾದಿಗೆ ನೀಡಿದ್ದು, ಅದನ್ನು ಪಿರ್ಯಾದಿಯು ಖಾತೆ ಹೊಂದಿರುವ ಎಸ್.ಬಿ.ಐ ಬ್ಯಾಂಕ ಕಾರಟಗಿ, ಶಾಖೆಗೆ ನಗದೀಕರಣಕ್ಕಾಗಿ ದಿನಾಂಕಃ 19.02.2021 ರಂದು ಸಲ್ಲಿಸಿದ್ದು, ಸದರಿ ಚೆಕ್ ಆರೋಪಿಯ **"Payment Stopped by the Drawer"** ಎಂಬ ಹಿಂಬರಹದೊಂದಿಗೆ ದಿನಾಂಕಃ 20.02.2021 ರಂದು

ಅಮಾನ್ಯಗೊಂಡಿರುತ್ತದೆ ಎಂದು ಬ್ಯಾಂಕಿನವರು ಹಿಂಬರಹ ನೀಡಿದ್ದು. ನಂತರ ದಿಃ 01.03.2021 ರಂದು ಫಿರ್ಯಾದಿ ತನ್ನ ವಕೀಲರ ಮುಖಾಂತರ ನೋಟೀಸನ್ನು ಕಳಿಸಿದ್ದು, ಸದರಿ ನೋಟಿಸು ತಿರಸ್ಕರಿಸಲಾಗಿದೆ ಎಂದು ದಿನಾಂಕಃ09.03.2021 ರಂದು ವಾಪಾಸ್ಸು ಬಂದಿರುತ್ತದೆ. ಆದರೂ ಸಹ ನೀನು ನಿಗದಿತ ಅವದಿಯೊಳಗೆ ಚೆಕ್ಕಿನ ಹಣವನ್ನು ಕೊಟ್ಟಿರುವುದಿಲ್ಲ ಹಾಗೂ ಉತ್ತರವನ್ನು ಸಹ ನೀಡಿರುವುದಿಲ್ಲ. ಈ ಮೂಲಕ ಆರೋಪಿಯಾದ ನೀನು ಈ ಮೂಲಕ ಲಿಖಿತ ವರ್ಗಾವಣಿ ಅಧಿನಿಯಮ ಕಲಂ **138** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದನೆ ಇರುತ್ತದೆ.

**ಸ್ಥಳ** ಃ ಕಾರಟಗಿ.
**ದಿನಾಂಕಃ 13-08-2024.**

ಸಿವಿಲ್ ಮತ್ತು **ಪ್ರಥಮ ದರ್ಜೆ ನ್ಯಾ.ದಂ.ಗಳು,**
ಕಾರಟಗಿ(ಸಂಚಾರಿ ಪೀಠ).

<u>**ಆರೋಪಿಯ ಹೇಳಿಕೆ**</u>

**ಪ್ರಶ್ನೆಃ ಈಗ** ನಿನ**ಗೆ ಓದಿ ಹೇಳಿದ ಆಪಾದನೆಯನ್ನು ಕೇಳಿಸಿಕೊಂಡಿದ್ದೀರಾ?**

**ಉತ್ತರಃ**

**ಪ್ರಶ್ನೆಃ ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ಪ್ರತಿರಕ್ಷಣೆ ಇದೆಯೊ?**

**ಉತ್ತರ** ಃ

ಆರೋಪಿಯ ಸಹಿಃ

**ಮೇಲಿನ ಆಪಾದನೆಯನ್ನು ಆರೋಪಿ**ತನಿ**ಗೆ ನನ್ನ ಸಮಕ್ಷಮದಲ್ಲಿ ಓದಿ ಹೇಳಿ, ಆರೋಪಿ**ತನ **ಕೊಟ್ಟ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ಬರೆದುಕೊಂಡಿರುತ್ತೇನೆ.**

**ಸ್ಥಳ** ಃ ಕಾರಟಗಿ.
**ದಿನಾಂಕಃ 13-08-2024.**

ಸಿವಿಲ್ ಮತ್ತು **ಪ್ರಥಮ ದರ್ಜೆ ನ್ಯಾ.ದಂ.ಗಳು,**
ಕಾರಟಗಿ(ಸಂಚಾರಿ ಪೀಠ).